ಅನುಬಂಧ – 'ಅ'

ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ದರೋಡೆ, ಕಳ್ಳತನ ಮತ್ತು ರಸ್ತೆ ದರೋಡೆಗಳ ಜಿಲ್ಲಾವಾರು ಅಂಕಿ-ಅಂಶಗಳ ವಿವರ – (1991ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ)

ಕ್ರ. ಸ.	ಜಿಲ್ಲೆ	ದರೋಡೆ			ಕಳ್ಳತನ			ರಸ್ತೆ ದರೋಡೆ		
		1989	1990	1991	1989	1990	1991	1989	1990	1991
1.	ಬೆಂಗಳೂರು ನಗರ	19	21	2	9111	8897	1623	–	–	–
2.	ಬೆಂಗಳೂರು	24	28	2	1261	1413	247	1	–	–
3.	ತುಮಕೂರು	2	17	3	1137	1287	236	–	2	1
4.	ಕೋಲಾರ	12	22	8	715	855	153	2	2	–
5.	ಕೆ.ಜಿ.ಎಫ್.	3	–	–	500	509	99	–	–	–
6.	ಮೈಸೂರು	13	8	–	929	1149	141	1	2	–
7.	ಮಂಡ್ಯ	9	8	–	568	653	104	–	–	–
8.	ಹಾಸನ	4	8	–	788	1177	92	–	–	–
9.	ಕೊಡಗು	–	35	–	322	317	47	–	1	–
10.	ಶಿವಮೊಗ್ಗ	11	7	–	851	853	146	–	–	–
11.	ಬಳ್ಳಾರಿ	7	14	2	509	719	97	–	8	2
12.	ಚಿತ್ರದುರ್ಗ	7	19	–	850	958	180	–	1	1
13.	ದಕ್ಷಿಣಕನ್ನಡ	3	2	–	511	741	157	–	–	–
14.	ಚಿಕ್ಕಮಗಳೂರು	11	–	–	430	574	189	–	–	1
15.	ಉತ್ತರ ಕನ್ನಡ	1	4	–	386	402	67	–	–	–
16.	ಬೆಳಗಾವಿ	13	8	2	910	1086	235	–	–	–
17.	ಬಿಜಾಪುರ	27	34	5	645	729	76	1	1	1
18.	ಧಾರವಾಡ	12	18	2	717	831	112	1	1	–
19.	ಗುಲ್ಬರ್ಗಾ	11	11	1	630	684	48	–	3	–
20.	ಬೀದರ್	9	5	–	417	473	48	5	1	–
21.	ರಾಯಚೂರು	22	20	4	487	559	83	5	5	1
22.	ಕೋಲ್ಕಾ	2	7	–	422	363	47	–	–	–
23.	ಮೈಸೂರು ನಗರ	3	6	–	818	1140	277	–	4	–
24.	ಹುಬ್ಬಳ್ಳಿ-ಧಾರವಾಡ ನಗರ	3	1	1	567	504	115	–	–	–
ಒಟ್ಟು		228	303	34	24481	26873	4619	16	31	7

ಫಜನಿ ಒಡ್ಡು ಯೋಜನೆ ಕೆಲಸದ ಬಗ್ಗೆ.

1360 – ಶ್ರೀ ಎನ್ ಪ್ರಭಾಕರ ರಾಣೆ (ಕಾರವಾರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ತಾಲ್ಲೂಕಿನ ಕಿನ್ನರ-ಫಜನಿ ಒಡ್ಡು (ಖಾರಿಲ್ಯಾಂಡ್) ಪ್ರೊಟೀಕ್ಷನ್ ಸ್ಕೀಮ್ ಕಾಮಗಾರಿಯು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಪುನಃ ಪ್ರಾರಂಭಿಸಲು ಸರ್ಕಾರದವರು ಕೈಗೊಂಡ ಕ್ರಮ ಎನು?

ಶ್ರೀ ಕೆ.ಎಸ್. ಮಲ್ಲಿಕಾರ್ಜನ ಪ್ರಸನ್ನ, (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಂದಿದೆ.

ಆ) ಈ ಕೆಲಸವನ್ನು ಭೂ ಸೇನಾ ನಿಗಮದವರು ಕೈಗೊಂಡು ಅರ್ಧದಲ್ಲಿ ನಿಲ್ಲಿಸಿರುವುದು. ಯೋಜನೆಯಲ್ಲಿ ಕೈಗೊಂಡ ಕೆಲವು ಬದಲಾವಣೆಗಳಿಂದ 1988-89ರ ದರಗಳಂತೆ ಪರಿಷ್ಕೃತ ಅಂದಾಜು ಸುಮಾರು ಲಕ್ಷ ರೂ. 65-13 ಆಗುತ್ತಿದ್ದು, ಅದರ ಮಂಜೂರಾತಿ ಮತ್ತು ಉಳಿದ ಹಣದ ಬರವಸೆಗಾಗಿ ಕೆಲಸವನ್ನು ನಿಲ್ಲಿಸಿರುತ್ತಾರೆ. 1991-92ನೇ ದರಗಳಂತೆ ಈ ಪರಿಷ್ಕೃತ ಅಂದಾಜು ವೆಚ್ಚ ರೂ. 119.75 ಲಕ್ಷಗಳಾಗುತ್ತಿದ್ದು ಅಂದಾಜು ಮಂಜೂರಾತಿ ಪಡೆದು ಮತ್ತು ಉಳಿದ ಹಣ ರೂ. 82.25 ಲಕ್ಷವನ್ನು ಜಿಲ್ಲಾ ಪರಿಷತ್ ಕಾರವಾರದವರು ಒದಗಿಸಿದಲ್ಲಿ, ಭೂ ಸೇನಾ ನಿಗಮದವರು ಈ ಕೆಲಸವನ್ನು ಪೂರ್ಣಗೊಳಿಸುತ್ತಾರೆ.

ಸಾರಾಯಿ ಹರಾಜುಗಳ ಬಗ್ಗೆ

148 – ಶ್ರೀ ಚೌದರೆಡ್ಡಿ (ಚಿಂತಾಮಣಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದು ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಸಾರಾಯಿ ಹರಾಜುಗಳನ್ನು ಎಷ್ಟು ಸಲ ಮಾಡಲಾಗಿದೆ. (ವರ್ಷವಾರು, ತಾಲ್ಲೂಕುವಾರು ಮತ್ತು ಯಶಸ್ವಿ ಸವಾಲುದಾರರ ವಿಳಾಸಗಳು ಮತ್ತು ಹರಾಜಿನ ಹಣದ ವಿವರಗಳನ್ನು ದಯವಿಟ್ಟು ನೀಡುವುದು).

ಆ) ಯಶಸ್ವಿ ಸವಾಲುದಾರರಿಗೆ ಸಾರಾಯಿ ಮಾರಾಟವನ್ನು ವಹಿಸುವಾಗ ತೆಗೆದುಕೊಂಡ ಭದ್ರತೆ ಮತ್ತು ಸವಾಲು ಹಣವನ್ನು ಸರ್ಕಾರಕ್ಕೆ ಪಾವತಿ ಮಾಡುವ ವಿಧಾನವೇನು.

ಇ) ಸಾರಾಯಿ ಮಾರಾಟದ ಸವಾಲು ಹಣವನ್ನು ಪಾವತಿ ಮಾಡುವಲ್ಲಿ ಗುತ್ತಿಗಾದಾರರು ಯಾರಾದರೂ ತಪ್ಪಿತಸ್ಥರಾಗಿರುತ್ತಾರೆಯೇ, ಹಾಗಿದ್ದಲ್ಲಿ, ಪ್ರತಿ ಗುತ್ತಿಗೆದಾರರಿಂದ ಬಾಕಿ ಇರುವ ಹಣವೆಷ್ಟು? (ವರ್ಷವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ದಯವಿಟ್ಟು ನೀಡುವುದು).

ಈ) ಪ್ರತಿ ಪ್ರಕರಣದಲ್ಲಿಯೂ ತಪ್ಪಿತಸ್ಥ ಗುತ್ತಿಗೆದಾರಿನಿಂದ ಬಾಕಿಯನ್ನು ವಸೂಲಿ ಮಾಡಲು ತೆಗೆದುಕೊಂಡಿರುವ ಕ್ರಮವೇನು?

ಅ) ಶ್ರೀ ಕೆ. ಶಿವಮೂರ್ತಿ, (ಅಬಕಾರಿ ರಾಜ್ಯ ಸಚಿವರು)

ವರ್ಷ	ಹರಾಜು ನಡೆಸಿದ್ದು
1987-88	3 ಸಲ
1988-89	ಒಂದು ಸಲ
1989-80	ಒಂದು ಸಲ

ಹರಾಜಿನಲ್ಲಿ ಯಶಸ್ವಿಯಾಗಿ ಗುತ್ತಿಗೆದಾರರ ಹೆಸರಿನ ಪಟ್ಟಿಯನ್ನು ಲಗತ್ತಿಸಲಾಗದೆ. (ಅನುಬಂಧ-1)

ಆ) $4\frac{1}{10}$ ರಷ್ಟು ತಿಂಗಳ ಬಾಡಿಗೆಯನ್ನು ಭದ್ರತಾ ಹಣದ ರೂಪದಲ್ಲಿ ಪಡೆಯಲಾಗುತ್ತದೆ. (1 ತಿಂಗಳ ಬಾಡಿಗೆಗೆ ಸಮನಾದ ಠೇವಣಿ ಮತ್ತು $3\frac{1}{10}$ ರಷ್ಟಕ್ಕೆ er 10ಸಮನಾದ ಮೊತ್ತಕ್ಕೆ ಇತರ ಭದ್ರತೆ) ಪ್ರತಿ ತಿಂಗಳ ಬಾಡಿಗೆಯನ್ನು ಬಡ್ಡಿ ರಹಿತವಾಗಿ ಆಯಾ ತಿಂಗಳ 10ನೇ ದಿನಾಂಕದೊಳಗೆ ಪಡೆಯ ಬಹುದಾಗಿದೆ. ಅನಂತರ ಸಲ್ಲಿಸುವ ಹಣಕ್ಕೆ ಶೇಕಡ 18 ರಂತೆ ಬಡ್ಡಿ ಕೊಡಬೇಕಾಗುತ್ತದೆ.

ಇ) ಇಲ್ಲ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.